## INCIDENTS AT MANDYA

ಶ್ರೀ ಕೋಣಂದೂರು ಲಿಂಗಪ್ಪ :—ಅಧ್ಯಕ್ಷರೇ, ನಾನು ಮತ್ತು ಶ್ರೀಮಾನ್ ಕೆ. ಹೆಚ್ ಹನುಮೇಗೌಡರು ಇಬ್ಬರೂ ಸೇರಿ ಒಂದು ನಿಲುವಳಿ ಸೂಚನೆಯನ್ನು ಕಳುಹಿಸಿದ್ದೇವೆ. ಅದು ಪತ್ರಿಕೆಯಲ್ಲೂ ಸಹ ಬಂದಿದೆ, ಅದು ಯಾವ ವಿಷಯ ಎಂದರೆ ಮಂಡ್ಯದಲ್ಲಿ ಆಗಿರತಕ್ಕಂಥ ಘಟನೆ ವಿಷಯ.

ಅಧ್ಯಕ್ಷರು :— ನಾಳೆ ಅದನ್ನು ತೆಗೆದುಕೊಳ್ಳುತ್ತೇನೆ.

## AFFAIRS OF THE MANGALORE FERTILISERS.

ಶ್ರೀ ಕಾಗೋಡು ತಿಮ್ಮಪ್ಪ :—ನಾನು ಒಂದು ಸಾರಿ ಮಂಗಳೂರು ಫರ್ಟಿಲೈಸರ್ಸ್ ಬಗ್ಗೆ ಒಂದು ಕಾಲ್ ಅಟೆನ್‌ಷನ್ ನೋಟೀಸ್ ಕಳುಹಿಸಿದ್ದೆ. ಅದಕ್ಕೆ ತಾವೂ ಕೂಡ ಅಪ್ಪಣೆ ಕೊಡಿಸಿದಿರಿ ಸರ್ಕಾರದವರು ಆ ಬಗ್ಗೆ ಒಂದು ಹೇಳಿಕೆ ಕೊಡುತ್ತಾರೆ ಎಂದು. ಸ್ಟೇಟ್‌ಮೆಂಟ್ ಕೊಡುತ್ತೇವೆ ಎಂದು ಸರ್ಕಾರದವರೂ ಕೂಡ ಒಪ್ಪಿಕೊಂಡಿದ್ದರು.

ಅಧ್ಯಕ್ಷರು :— ಅದನ್ನು ನಾನು ನೋಡಿಸುತ್ತೇನೆ.

ಶ್ರೀ ಕಾಗೋಡು ತಿಮ್ಮಪ್ಪ :—ಅಲ್ಲಿಯ ಕಾರ್ಪೊರೇಷನ್ ಅಧ್ಯಕ್ಷರು ನಡೆದುಕೊಂಡ ರೀತಿ ನೋಡಿದರೆ ಒಬ್ಬ ಸಾಮಾನ್ಯ ಸದಸ್ಯರು ಕೂಡ ಆ ಸಭೆಗೆ ಹೋಗುವಂತೆ ಇಲ್ಲ. ಅಲ್ಲಿ ಕಾರ್ಯಕ್ರಮಗಳು ಸ್ವೇಚ್ಛಾರೀತಿಯಲ್ಲಿ ನಡೆಯುತ್ತಾ ಇವೆ. ಅದರಲ್ಲಿ ನಮ್ಮ ರಾಜ್ಯ ಸರ್ಕಾರದ ಬಂಡವಾಳ ಇರುವುದರಿಂದ ದಯವಿಟ್ಟು ಈ ಬಗ್ಗೆ ಸರ್ಕಾರದ ವತಿಯಿಂದ ಒಂದು ಹೇಳಿಕೆ ಕೊಟ್ಟರೆ ನಮಗೆ ಸಮಾಧಾನವಾಗುತ್ತದೆ. ಇದು ಒಂದು ಪ್ರಾಮುಖ್ಯವಾದ ವಿಷಯವಾಗಿರುವುದರಿಂದ ದಯವಿಟ್ಟು ಇದನ್ನು ತೆಗೆದುಕೊಳ್ಳಬೇಕು ಎಂದು ಹೇಳುತ್ತೇನೆ.

ಅಧ್ಯಕ್ಷರು:—ದಯವಿಟ್ಟು ಕೂತುಕೊಳ್ಳಿ. ನಾನು ಅದನ್ನು ನೋಡಿಸುತ್ತೇನೆ.

## CALLING ATTENTION TO MATTERS OF URGENT PUBLIC IMPORTANCE.

*Re : Strike by workers of A.C.C. Engineering works Shahabad, Gulbarga District.*

SRI M. S. KRISHNAN (Malleswaram).—I call the attention of the Hon. Minister for Labour and Tourism to the strike by the workers of A. C. C. Engineering Works, Shahabad, Gulbarga District.

SRI S. M. YAHYA (Minister for Labour).—I wish to make the following statement:

The workmen of the A. C. C. Heavy Engineering Shahabad, had demanded an increase in the wages consequent to the rise in prices. The management of the Company were not in a position to accept the demand in full since there war already a subsisting settlement. However, they were prepared to meet the demand of the workmen to a reasonable extent inspite of the existence of the settlement. The offer made by the management was not acceptable to workmen and the workmen are on strike since 26-2-1974.

The Additional Labour Commissioner who is also the incharge Commissioner of Labour had convened a joint meeting at Bangalore on 28-2-1974. The representative of the management was present but no representative was present from the side of the workmen.

In the meanwhile the dispute was also admitted in conciliation by the Assistant Labour Commissioner and Conciliation Officer, Gulbarga. At both the conciliation meetings there was no representative of the workmen present. The Conciliation Officer has, therefore, submitted a failure report to Government and his recommendations will be examined.

Meanwhile, I have advised the incharge Labour Commissioner to proceed to Shahabad and to make one more attempt to resolve the deadlock and to see that normalcy is restored. The incharge Labour Commissioner is leaving for Shahabad this evening.

ಶ್ರೀ ಎಂ. ಎಸ್. ಕೃಷ್ಣನ್ : ಸ್ವಾಮಿ ಇದರೊಳಗೆ ಏನಾಗಿದೆ ಎಂದರೆ ಅಲ್ಲಿಯ ಕೆಲಸಗಾರರ ಪ್ರತಿನಿಧಿಗಳು ಕನ್ಸಿಲಿಯೇಷನ್ ಆಫೀಸರ ಜೊತೆಯಲ್ಲಿ ಭಾಗವಹಿಸುವುದಕ್ಕೆ ಬರುವುದಿಲ್ಲ. ಇದಕ್ಕೆ ಮುಖ್ಯವಾದ ಕಾರಣ ಏನೆಂದರೆ ಆ ಕನ್ಸಿಲಿಯೇಷನ್ ಆಫೀಸರೂ ಸಹ ಆ ಮ್ಯಾನೇಜ್‌ಮೆಂಟಿನವರು ಹೇಳಿದುದನ್ನೇ

(ಶ್ರೀ ಎಂ. ಎಸ್. ಕೃಷ್ಣನ್)

ಪುನರಾವರ್ತನೆ ಮಾಡಿ ಹೇಳುತ್ತಿದ್ದಾರೆ. ಆದುದರಿಂದ ಆ ಕಾರ್ಮಿಕ ಪ್ರತಿನಿಧಿಗಳು ನಾವು ಬಂದರೂ ಏನು ಪ್ರಯೋಜನವಿಲ್ಲವೆಂದು ಅವರಿಗೆ ತಿಳುವಳಿಕೆ ಕೊಟ್ಟಿರುವುದು ತಮ್ಮ ಗಮನಕ್ಕೆ ಬಂದಿದೆಯೇ ?

ಇನ್ನು ಎರಡನೆಯದಾಗಿ ಹೇಳುವುದಾದರೆ ಅದರ ಪಕ್ಕದ ಕಾರ್ಖಾನೆಯೂದ ಎ. ಸಿ. ಸಿ. ಕಾರ್ಖಾನೆಯಲ್ಲಿ ಆಲ್ಲಿ ಕಾರ್ಮಿಕರಿಗೆ 300 ರೂಪಾಯಿ ವೇತನ ಬರುತ್ತಿದೆ, ಇಲ್ಲಿ ಕಾರ್ಮಿಕರಿಗೆ 200-250 ರೂಪಾಯಿ ವೇತನ ಬರುತ್ತಾ ಇದೆ. ಕೆಲಸ ಒಂದೇ ರೀತಿ ಇದ್ದರೂ ಸಹ ವೇತನದ ಅಂತರ ಇಷ್ಟು ಇರುತ್ತದೆ. ಆದುದರಿಂದ ಇದರ ಬಗ್ಗೆ ತಾವೇ ಆ ಇಬ್ಬರನ್ನೂ ಕರೆಸಿ ಒಂದು ಮಧ್ಯಸ್ತಿಕೆ ಮಾಡಿ ಒಂದು ನ್ಯಾಯ ಕೊಡುವುದು ಒಳ್ಳೆಯದಲ್ಲವೇ ? ಇದರ ಬಗ್ಗೆ ಏನು ಹೇಳುತ್ತೀರಾ ?

ಶ್ರೀ ಎಸ್. ಎಂ. ಯಾಹ್ಯಾ : ಈಗಾಗಲೇ ಅಲ್ಲಿಗೆ ಅವರನ್ನು ಕರೆಸಿದ್ದರು. ಆದರಲ್ಲಿ ಮ್ಯಾನೇಜ್‌ಮೆಂಟು ರೆಪ್ರಸೆಂಟೇಟೀವ್ ಬಂದಿದ್ದರು. ಕಾರ್ಮಿಕ ವರ್ಗದವರ ರೆಪ್ರೆಸೆಂಟೇಟೀವ್ ಬರಲಿಲ್ಲ, ಮತ್ತು ಇಲ್ಲೂ ಕೂಡ ಕನ್ಸಿಲಿಯೇಷನ್ ಆಫೀಸರ್ ಮೀಟಿಂಗ್ ಇಟ್ಟುಕೊಂಡಿದ್ದರು. ಆ ಮೀಟಿಂಗ್‌ನಲ್ಲೂ ಕೂಡ ವರ್ಕ್‌ಮೆನ್ ರೆಪ್ರಸೆಂಟಿಟೀವ್ ಬರಲಿಲ್ಲ. ಆದುದರಿಂದ ಪುನಃ ಅಲ್ಲಿಗೆ ಮತ್ತೊಂದು ಸಾರಿ ಹೋಗಿ ವಿಚಾರ ಮಾಡಿಕೊಂಡು ಬರಬೇಕೆಂದು ಅಡ್ವೈಸ್ ಮಾಡಿದ್ದೇವೆ.

ಶ್ರೀ ಎಂ. ಎಸ್. ಕೃಷ್ಣನ್ : ಆ ಮೀಟಿಂಗ್‌ಗೆ ವರ್ಕ್‌ಮೆನ್ ರೆಪ್ರಸೆಂಟೇಟೀವ್ ಬರದೇ ಇರುವುದಕ್ಕೆ ಕಾರಣ ಅವರಿಗೆ ಕನ್ಸಿಲಿಯೇಷನ್ ಆಫೀಸರ ಮೇಲೆ ನಂಬಿಕೆ ಇಲ್ಲ ಎಂದು. ಆದುದರಿಂದ ತಮ್ಮ ಲೆವಲ್‌ನಲ್ಲಾದರೂ ಅವರಿಬ್ಬರನ್ನೂ ಕರೆಸಿ ಈ ವಿಷಯವನ್ನು ಮಾತನಾಡುವುದಕ್ಕೆ ಪ್ರಯತ್ನ ಪಡುತ್ತೀರಾ ?

ಶ್ರೀ ಎಸ್. ಎಂ. ಯಾಹ್ಯಾ : ಅಸಿಸ್ಟೆಂಟ್ ಲೇಬರ್ ಕಮೀಷನರ್‌ರವರಲ್ಲಿ ನಂಬಿಕೆ ಇಲ್ಲದಿದ್ದರೆ ಅವರ ಜೊತೆಯಲ್ಲಿ ಇನ್‌ಚಾರ್ಜ್ ಲೇಬರ್ ಕಮೀಷನರ್ ಅವರನ್ನೂ ಕಳುಹಿಸುತ್ತಾ ಇದ್ದೇವೆ. ಆದುದರಿಂದ ಅವರು ಅಲ್ಲಿಗೆ ಹೋಗಿ ಒಂದು ಯಥಾಸ್ಥಿತಿಗೆ ಬರುವ ಹಾಗೆ ಮೊದಲು ಪ್ರಯತ್ನ ಮಾಡುತ್ತಾರೆ ಎನ್ನುವ ನಂಬಿಕೆ ನನಗೆ ಇದೆ.

## (ii) Re : Janatha Housing Scheme at Haralakatte Arsikere Taluk

Sri H. S. Siddappa (Hassan) I call the attention of the Minister for Transport and Housing to the hardships